# <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ಆರ್ಥಿಕ ವರ್ಷ 2017–18ರಿಂದ ತೆಗೆದು ಹಾಕುವ ಬಗ್ಗೆ.

**<u>ಓದಲಾಗಿದೆ:</u>**

1. ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ: ಸಿ: 70/2017 ದಿನಾಂಕ: 28.01.2017.

**<u>ಪ್ರಸ್ತಾವನೆ:</u>**

ಆಯವ್ಯಯ ವಿಧಾನದಲ್ಲಿರುವ ಯೋಜನೆ ಮತ್ತು ಯೋಜನೇತರ ವೆಚ್ಚಗಳ ನಡುವಿನ ಭಿನ್ನತೆಯನ್ನು, ಯೋಜನೆ ಆಧಾರಿತ ಆರ್ಥಿಕ ಬೆಳವಣಿಗೆಯನ್ನು ದೇಶದಲ್ಲಿ ಅಳವಡಿಸಿಕೊಂಡಂತಹ ಸಂದರ್ಭದಲ್ಲಿ ತರಲಾಯಿತು. ಇಂತಹ ವರ್ಗೀಕರಣದ ಪ್ರಸ್ತುತತೆ ಮತ್ತು ಫಲದಾಯಕತೆ ಬಗ್ಗೆ ಉನ್ನತ ಮಟ್ಟದ ಪರಿಣಿತ ಸಮಿತಿ (Expert Committe) (ಸಿ.ರಂಗರಾಜನ್ ಸಮಿತಿ) ಮತ್ತು ಆಡಳಿತ ಸುಧಾರಣೆ ಆಯೋಗವು (ARC) ಚರ್ಚಿಸಿ ತನ್ನ 14ನೇ ವರದಿಯಲ್ಲಿ ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ಹೋಗಲಾಡಿಸಬೇಕೆಂದು ಶಿಫಾರಸ್ಸು ಮಾಡಿವೆ. ಕೇಂದ್ರ ಸರ್ಕಾರವು ಸಹ ಆಯವ್ಯಯದ ಸರ್ಕಾರದ ವೆಚ್ಚಗಳಲ್ಲಿ ಈ ವರ್ಗೀಕರಣವನ್ನು ಆರ್ಥಿಕ ವರ್ಷ 2017–18ರಿಂದ ತೆಗೆಯಲಾಗುವುದೆಂದು ಘೋಷಿಸಿದೆ.

ಯೋಜನೆ ಮತ್ತು ಯೋಜನೇತರ ವೆಚ್ಚಗಳ ವಿಂಗಡಣೆಯ ಪರಿಣಾಮವಾಗಿ ವಿವಿಧ ಕಾರ್ಯಕ್ರಮ ಮತ್ತು ಯೋಜನೆಗಳ ಸಂಪನ್ಮೂಲ ಹಂಚಿಕೆಯ ದೃಷ್ಟಿಕೋನವು ಸೀಮಿತಗೊಂಡಿದ್ದು (fragmented view), ಯೋಜನೆ ಮತ್ತು ಯೋಜನೇತರದ ಭಿನ್ನತೆಯಿಂದಾಗಿ ಸರ್ಕಾರದ ವೆಚ್ಚಗಳಲ್ಲಿನ ಅಭಿವೃದ್ಧಿ ಮತ್ತು ಅಭಿವೃದ್ದಿಯೇತರ ಆಯಾಮಗಳ ಬಗ್ಗೆ ತೃಪ್ತಿಕರವಾದ ವಿಂಗಡಣೆಯನ್ನು ಒದಗಿಸಲು ಸಾಧ್ಯವಾಗಿಲ್ಲದಿರುವುದರಿಂದ, ಯೋಜನೆ ಮತ್ತು ಯೋಜನೇತರದ ನಡುವಿನ ಬೇಧವನ್ನು ತೆಗೆಯಬೇಕೆಂದು ನಿರ್ಧರಿಸಿದೆ.

ಪ್ರಸ್ತಾವನೆ ಬಗ್ಗೆ ಯೋಜನಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯನ್ನು ಸಮಾಲೋಚಿಸಿ, ಅನುಮೋದನೆ ಪಡೆಯಲಾಗಿದೆ.

## <u>ಸರ್ಕಾರದ ಆದೇಶ ಸಂಖ್ಯೆ: ಆಇ 04 ಬಿಪಿಇ 2017, ದಿನಾಂಕ: 01.02.2017</u>

ಈ ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರ್ಥಿಕ ವರ್ಷ 2017–18ನೇ ಸಾಲಿನಿಂದ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ತೆಗೆದುಹಾಕಲಾಗಿದೆ.

ಈ ನಿರ್ಧಾರವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಆಯವ್ಯಯ ಸಂಪುಟಗಳಲ್ಲಿ ಸೂಕ್ತ ಬದಲಾವಣೆಯನ್ನು ಮಾಡಲಾಗುವುದು ಹಾಗೂ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

a. <u>**ಆಯವ್ಯಯ ಪ್ರಕ್ರಿಯೆ**</u>

i. ಹಿಂದಿನಂತೆ ಆಯವ್ಯಯ ಸಂಪನ್ಮೂಲಗಳನ್ನು ಆರ್ಥಿಕ ಇಲಾಖೆ ಅಂದಾಜಿಸುವುದನ್ನು ಮುಂದುವರೆಸುತ್ತದೆ.

ii. ಬದ್ದ ವೆಚ್ಚಗಳ ಅಡಿಯಲ್ಲಿ ಪ್ರಮುಖವಾದ ಹಿಂದಿನ ಯೋಜನೇತರ ವೆಚ್ಚಗಳ ಅಂದಾಜುಗಳನ್ನು ಸಹ ಆರ್ಥಿಕ ಇಲಾಖೆ ನಿರ್ವಹಿಸುತ್ತದೆ.

iii. ಹಿಂದಿನ ಯೋಜನಾ ಕಾರ್ಯಕ್ರಮಗಳ ಪೈಕಿ, ಕೇವಲ ವೇತನ, ವೇತನಾನುದಾನ ಮತ್ತು ಆಡಳಿತಾತ್ಮಕ ವೆಚ್ಚಗಳ ಅಂಶಗಳನ್ನು ಮಾತ್ರ ಒಳಗೊಂಡ ಕಾಂಪೊನೆಂಟ್‌ಗಳು ಸಹ ಆರ್ಥಿಕ ಇಲಾಖೆಯಿಂದ ಅಂದಾಜಿಸಲ್ಪಡುತ್ತದೆ.

iv. ಆಯವ್ಯಯದಲ್ಲಿ ಬದ್ದ ವೆಚ್ಚವಲ್ಲದ ಭಾಗವನ್ನು ವಲಯವಾರು ಹಂಚಿಕೆಗಾಗಿ ಯೋಜನಾ ಇಲಾಖೆಗೆ ಕಳುಹಿಸಲಾಗುವುದು. ವಿವರವಾದ ನಿರ್ದೇಶನವನ್ನು ಆಯವ್ಯಯದ ಸಮಯದಲ್ಲಿ ಟಿಪ್ಪಣಿಯ ಮುಖಾಂತರ ಯೋಜನಾ ಇಲಾಖೆಗೆ ನೀಡಲಾಗುವುದು.

v. ಇಲಾಖೆಗಳು ತಮಗೆ ಸಂಬಂಧಪಟ್ಟ ವಲಯವಾರು ಹಂಚಿಕೆಯ ಕಾರ್ಯಕ್ರಮವಾರು ವಿಂಗಡಣೆಯನ್ನು ಒದಗಿಸುತ್ತವೆ.

b. <u>**ಯೋಜನಾ ಇಲಾಖೆಯ ಪಾತ್ರ**</u>

ಯೋಜನಾ ಇಲಾಖೆಯು ಆಯವ್ಯಯದಲ್ಲಿನ ಬದ್ದವಲ್ಲದ ವೆಚ್ಚದ ಭಾಗವನ್ನು ವಲಯವಾರು ಹಂಚಿಕೆ ಮಾಡುತ್ತದೆ. ಹಾಗೆ ಮಾಡುವಾಗ ಖಚಿತಪಡಿಸಿಕೊಳ್ಳಲಾಗುವ ಅಂಶಗಳೆಂದರೆ:

i. ಸಂಪನ್ಮೂಲ ಆಧರಿಸಿದ ವೆಚ್ಚ (ಇ.ಎ.ಪಿ., ಸಿ.ಎಸ್.ಎಸ್., ಆರ್.ಐ.ಡಿ.ಎಫ್)ವನ್ನು ಕಾಯ್ದುಕೊಳ್ಳುವುದು

ii. ಬದ್ದ ವೆಚ್ಚಗಳನ್ನು ಕಾಯ್ದುಕೊಳ್ಳುವುದು (ವೇತನ, ವೇತನಾನುದಾನ ಮತ್ತು ಪ್ರಮಾಣ ಆಧಾರಿತ (scale based ಯೋಜನೆಗಳು)

iii. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಮತ್ತು ಎಸ್.ಡಿ.ಪಿ.ಗೆ ಮೀಸಲಿಡುವುದನ್ನು ಖಚಿತಪಡಿಸಿಕೊಳ್ಳುವುದು

c. **ಪರಿಶಿಷ್ಟ ಜಾತಿ ಉಪ ಯೋಜನೆ/ ಗಿರಿಜನ ಉಪ ಯೋಜನೆ(ಎಸ್‌ಸಿಎಸ್‌ಪಿ/ಟಿಎಸ್‌ಪಿ)**

ಈವರೆವಿಗೂ, ಯೋಜನಾ ಅಂದಾಜುಗಳ ಶೇಕಡ 24.10ರ ಪ್ರಮಾಣವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿ ನಿಗಧಿಪಡಿಸಲು ಪರಿಗಣಿಸಲಾಗುತ್ತಿತ್ತು ಮತ್ತು ಯೋಜನೇತರ ವೆಚ್ಚಗಳನ್ನು ಮೂಲದಲ್ಲಿ ಪರಿಗಣಿಸುತ್ತಿರಲಿಲ್ಲ. 2017–18ರಿಂದ ಯೋಜನೆ ಮತ್ತು ಯೋಜನೇತರದಲ್ಲಿನ ವಿಂಗಡಣೆಯು ಇಲ್ಲದೇ ಹೋಗುವುದರಿಂದ ಇದು ಬದಲಾಗುತ್ತದೆ. ಆದುದರಿಂದ, ಮೀಸಲಿಡುವುದರಿಂದ ಹೊರತಾದ ವೆಚ್ಚಗಳನ್ನು ಈ ಮೂಲದಿಂದ ಬೇರ್ಪಡಿಸಬೇಕಾಗುತ್ತದೆ.

ಆದುದರಿಂದ ವೆಚ್ಚಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗುತ್ತದೆ:

i. ವೇತನ, ವೇತನಾನುದಾನ (ಜಿಐಎ), ಪಿಂಚಣಿ, ಆಡಳಿತಾತ್ಮಕ ವೆಚ್ಚ, ರಾಜ್ಯ ಸರ್ಕಾರದ ಸಾಲ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಆಯವ್ಯಯೇತರ ಸಾಲಗಳ ಕಾರಣದಿಂದ ಉಂಟಾಗುವ ಅಸಲು ಮರುಪಾವತಿ ಮತ್ತು ಬಡ್ಡಿ ಪಾವತಿ ಮತ್ತು ಸರ್ಕಾರವು ಗುರುತಿಸುವ ಇತರೆ ಆಡಳಿತಾತ್ಮಕ ಸ್ವರೂಪದ ವೆಚ್ಚ ಇವುಗಳನ್ನು ಒಳಗೊಂಡ ವಿನಾಯತಿ ವೆಚ್ಚಗಳು (Exempted Expenditure).

ii. ಹಂಚಿಕೆಗೊಳಿಸಬಹುದಾದ ಆಯವ್ಯಯ ಅಂದರೆ ಒಟ್ಟು ಸಂಚಿತ ನಿಧಿಯ ವೆಚ್ಚದಲ್ಲಿ ವಿನಾಯತಿ ವೆಚ್ಚಗಳನ್ನು ಕಡಿಮೆಗೊಳಿಸಿದ ನಂತರದ ಆಯವ್ಯಯ.

ಈ ಮೇಲಿನ (ii) ಅನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಂಚಿಕೆಗಳನ್ನು ಲೆಕ್ಕ ಹಾಕಲು ಮೂಲವಾಗಿ ಉಪಯೋಗಿಸಿಕೊಳ್ಳಲಾಗುವುದು. ಈ ಮೂಲದ ಶೇಕಡ 24.1ನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿಗಳಿಗೆ ಮೀಸಲಿಡಲಾಗುವುದು.

d. **ಆಂತರಿಕ ಹೆಚ್ಚುವರಿ ಆಯವ್ಯಯ ಸಂಪನ್ಮೂಲಗಳು(ಐ.ಇ.ಬಿ.ಆರ್)**

ಯೋಜನಾ ಆಯವ್ಯಯದ ಗಾತ್ರವನ್ನು ಪ್ರಸ್ತುತದಲ್ಲಿ, ರಾಜ್ಯದ ಆಯವ್ಯಯದ ನೆರವು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಐ.ಇ.ಬಿ.ಅರ್ ಇವುಗಳನ್ನು ಒಟ್ಟುಗೂಡಿಸಿ ಲೆಕ್ಕ ಮಾಡಲಾಗುತ್ತಿದೆ. ಇವುಗಳು ಸಹ ಅಭಿವೃದ್ಧಿಗೆ ಸಂಬಂಧಿಸಿರುವುದರಿಂದ ಈ ಸಂಸ್ಥೆಗಳ ವೆಚ್ಚಗಳನ್ನು ತೋರಿಸುವುದನ್ನು ಮುಂದುವರೆಸಲಾಗುವುದು. ಆದರೆ, ಇದನ್ನು ಇಲಾಖೆಯ ಒಟ್ಟಾರೆ ಹಂಚಿಕೆಯ ಭಾಗವಾಗಿ ತೋರಿಸಲಾಗುವುದು.

e. **ಕೇಂದ್ರ ಯೋಜನೆಗಳು**

ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಕೇಂದ್ರವು ನೆರವು ನೀಡುವುದನ್ನು ಮುಂದುವರೆಸುತ್ತದೆ. ಕೇಂದ್ರ ನೆರವಿನ ರಾಜ್ಯ ಯೋಜನೆಯಲ್ಲಿ (ಸಿಎಎಸ್‌ಪಿ), ಕೇಂದ್ರದ ಪಾಲನ್ನು ಸಹ ರಾಜ್ಯ ಯೋಜನೆಯ ಭಾಗವಾಗಿ ಪರಿಗಣಿಸಲಾಗುತ್ತಿತ್ತು. ಆದರೆ ಯೋಜನೆ–ಯೋಜನೇತರದ ನಡುವಿನ ಭಿನ್ನತೆಯು ಹೋಗುವುದರಿಂದ ಯೋಜನೆಗಳನ್ನು ಸಿಎಎಸ್‌ಪಿ ಮತ್ತು ಸಿಎಸ್‌ಎಸ್ ಎಂಬುದಾಗಿ ವಿಂಗಡಿಸುವ ಅವಶ್ಯಕತೆಯಿರುವುದಿಲ್ಲ.

f. **<u>ವಿಶೇಷ ಅಭಿವೃದ್ಧಿ ಯೋಜನೆ(ಎಸ್‌ಡಿಪಿ)</u>**

ಯೋಜನಾ ಇಲಾಖೆಯು ವಿಶೇಷ ಅಭಿವೃದ್ಧಿ ಯೋಜನೆಗಾಗಿ ಮೊತ್ತ ಒದಗಿಸುವುದನ್ನು ಮುಂದುವರೆಸುತ್ತದೆ ಮತ್ತು ವಲಯವಾರು ಇದನ್ನು ವಿಂಗಡಿಸುತ್ತದೆ.

g. **<u>ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿ (ಆರ್.ಐ.ಡಿ.ಎಫ್)/ಬಾಹ್ಯ ನೆರವಿನ ಯೋಜನೆ (ಇ.ಎ.ಪಿ)/ಇನ್ನಿತರೆ ಸಂಪನ್ಮೂಲಗಳಿಗೆ ಸಂಬಂಧಿಸಿದ ವೆಚ್ಚ</u>**

ಯೋಜನಾ ಇಲಾಖೆಯು ಸಂಪನ್ಮೂಲ ಆಧಾರಿತ ವೆಚ್ಚದ ಗುಂಪಿನಡಿ ಇದನ್ನು ಕಾಯ್ದುಕೊಳ್ಳುವ ಆಧಾರದ ಮೇಲೆ ಈಗಿನಂತೆಯೇ ಒದಗಿಸುವುದನ್ನು ಮುಂದುವರೆಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿಂಧು. ಬಿ)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲಗಳು)
ಆರ್ಥಿಕ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) / (ಜಿ & ಎಸ್‌ಎಸ್‌ಎ) / (ಇ & ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
3. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
8. ಆರ್ಥಿಕ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
9. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
10. ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.